ಸ್ಯಾಂಕ್ಷನ್ ಆಗಿಲ್ಲ. 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ರಸ್ತೆಗಳ ಬಗ್ಗೆ ಹಣವನ್ನು ಇಟ್ಟಿರುವುದೇ ಕಡಿಮೆ ಎಂದು ನನಗೆ ತಿಳಿದಿದೆ. ಆರ್ಥಿಕ ಅಭಿವೃದ್ಧಿ ಆಗಬೇಕಾದರೆ ರಸ್ತೆ ಬಹಳ ಪ್ರಮುಖ ರಸ್ತೆ ಚೆನ್ನಾಗಿರಬೇಕು; ಇಂಟರ್ ಸ್ಟೇಟ್ ಕಮ್ಯುನಿಕೇಷನ್ ಕೂಡ ಚೆನ್ನಾಗಿ ಆಗಬೇಕೆಂಬ ಮಾತನ್ನು ಹೇಳುತ್ತೇವೆ. ಆದರೆ ಕಾರ್ಯರೂಪಕ್ಕೆ ತರಬೇಕಾದರೆ ಪ್ರಮುಖರಾಗಿ ಬೇಕಾಗಿರತಕ್ಕದ್ದು ಹಣ. ಹಣ ಒದಗಿಸದೇ ಹೋದರೆ ಹೊಸದಾಗಿ ಅಭಿವೃದ್ಧಿ ಆಗುವುದಿಲ್ಲ. ಕರ್ನಾಟಕಕ್ಕೆ ಅನ್ಯಾಯ ಆಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ದಕ್ಷಿಣ ಅಂದರೆ ಡೆಲ್ಲಿಯವರು ಸ್ವಲ್ಪ ಜಾಸ್ತಿ ನೋಡುವುದು ತಮಿಳುನಾಡು ಮತ್ತು ಕೇರಳ ನಮ್ಮ ಕಡೆಗೆ ಅವರ ದೃಷ್ಟಿ ಬೀಳುತ್ತಿಲ್ಲ. ಮಾನ್ಯ ಸದಸ್ಯರು ಏನು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಅವರ ಕಳಕಳಿಯ ಜೊತೆಗೆ ನಾನು ನನ್ನ ಧ್ವನಿ ಗೂಡಿಸುತ್ತಿದ್ದೇನೆ.

ಶ್ರೀ ಎ.ಟಿ. ರಾಮಸ್ವಾಮಿ: ಅಧ್ಯಕ್ಷರೇ, ನಾನು ಕೇಳಿದ್ದುದು ಬೇರೆ ರಾಜ್ಯಕ್ಕೂ ಕೂಡ 20 ವರ್ಷಗಳಲ್ಲಿ ಒಂದು ಕಿ.ಮೀ. ರಾಷ್ಟ್ರೀಯ ಹೆದ್ದಾರಿ ಸೇರ್ಪಡೆ ಆಗಿಲ್ಲವೇ ಎಂದು? ಬರೀ ಕರ್ನಾಟಕ ರಾಜ್ಯಕ್ಕೆ ಮಾತ್ರ ಹಣಕಾಸಿನ ತೊಂದರೆ ಇದೆಯೋ, ಬೇರೆ ರಾಜ್ಯಗಳಿಗೂ ಹಣಕಾಸಿನ ತೊಂದರೆ ಇದೆಯೇ? ಇದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ ನಿಜ. ಕೇಂದ್ರದಲ್ಲಿ ಇರತಕ್ಕಂಥ ನಮ್ಮ ಪ್ರಜಾಪ್ರತಿನಿಧಿಗಳು ಮತ್ತು ನಮ್ಮ ಸರ್ಕಾರ ರಾಜ್ಯಕ್ಕೆ ದೊರಕಬೇಕಾದ ಈ ಸೌಲಭ್ಯವನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿಲ್ಲ ಎಂದು ನಾನು ನೇರವಾಗಿ ಹೇಳಬೇಕಾಗುತ್ತದೆ. ಅದನ್ನು ತಾವು ಕೂಡ ಒಪ್ಪಿಕೊಂಡಿದ್ದೀರಿ, ಕೇಂದ್ರದಿಂದ ನಮ್ಮ ರಾಜ್ಯಕ್ಕೆ ಬರಬೇಕಾದ ಸೌಲಭ್ಯವನ್ನು ಪಡೆದುಕೊಳ್ಳುವಲ್ಲಿ ನಮ್ಮ ಕೇಂದ್ರದ ಪ್ರತಿನಿಧಿಗಳೂ ಕೂಡ ಪ್ರಯತ್ನ ಮಾಡಲಿಲ್ಲ. ಒಟ್ಟಿನಲ್ಲಿ ನಮ್ಮ ರಾಜ್ಯಕ್ಕೆ ಬೇಕಾದ ಸೌಲಭ್ಯವನ್ನು ಪಡೆದುಕೊಳ್ಳುವಲ್ಲಿ ಏನು ದೃಢ ನಿರ್ಧಾರವನ್ನು ರಾಜ್ಯ ಸರ್ಕಾರ ಮಾಡುತ್ತದೆ ಎಂಬುದನ್ನು ತಿಳಿಸಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ನನ್ನ ಉತ್ತರವನ್ನು ಮಾನ್ಯ ಸದಸ್ಯರೇ ಹೇಳಿದ್ದಾರೆ.

ಹೇಮಾವತಿ ನೀರಾವರಿ ಯೋಜನೆ

171 - ಶ್ರೀ ಎಸ್. ಷಫಿ ಅಹ್ಮದ್ (ತುಮಕೂರು): ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹೇಮಾವತಿ ಯೋಜನೆಯ ಒಟ್ಟು, ಅಂದಾಜು ಮೊತ್ತ ಎಷ್ಟು ಮತ್ತು ಈವರೆಗೆ ವೃತ್ತಾವಾರು ಖರ್ಚಾದ ಮೊತ್ತದ ವಿವರ?*

ಆ) *ತುಮಕೂರು ನಾಲೆಯ ಕಾಮಗಾರಿಯ ಈಗಿನ ಹಂತ ಹಾಗೂ ಬುಗುಡನಹಳ್ಳಿ ಕೆರೆಯವರೆಗೆ ಕಾಮಗಾರಿಯನ್ನು ಯಾವಾಗ ಮುಗಿಸಲಾಗುವುದು?*

ಇ) *ಆಡ್ಡಮೋರಿ ಮತ್ತು ವಿತರಣಾ ನಾಲೆಗಳ ಕಾಮಗಾರಿಗಳ ಈಗಿನ ಹಂತ: (ವಿಭಾಗವಾರುಮಾಹಿತಿಗಳನ್ನು ಹಾಗೂ ವೆಚ್ಚದ ವಿವರಗಳನ್ನು ಕೊಡುವುದು)*

ಈ) *ಸಮಾನಾಂತರ ಮೇಲ್ಗಾಲುವೆ, ಮತ್ತು ವೈ ನಾಲಾ ಪಂಕ್ತಿಯ ಕೆಲಸಗಳನ್ನು ಯಾವಾಗ ಮುಗಿಸಲಾಗುವುದು.*

ಉ) *ಈವರೆಗಿನ ಖರ್ಚಾದ ಮೊತ್ತ ಹಾಗೂ ಯೋಜನೆಯ ಅಂದಾಜು?*

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ರೂ. 588.00 ಕೋಟಿಗಳು (85-86ರ ದರಪಟ್ಟಿಯ ಪ್ರಕಾರ)

		ಕೋಟಿಗಳು
1)	ಹೇಮಾವತಿ ಯೋಜನಾ ವೃತ್ತ	ರೂ. 163.92
2)	ಹೇಮಾವತಿ ನಾಲಾ ವೃತ್ತ	ರೂ. 160.00
3)	ತುರುವೇಕೆರೆ ವೃತ್ತ	ರೂ. 76.48

4) ಹೇಮಾವತಿ ಎಡದಂಡೆ ನಾಲಾ
ವೃತ್ತ ಕೆ.ಆರ್.ಪೇಟೆ. ರೂ. 105.20

5) ಅಧೀಕ್ಷಕ ಅಭಿಯಂತರರು (ವಿನ್ಯಾಸ)
ತುಮಕೂರು ವೃತ್ತ ರೂ. 48.40

ಆ) ತುಮಕೂರು ಉಪ ನಾಲೆಯ ಒಟ್ಟು ಉದ್ದ 240 ಕಿ.ಮೀ.ಗಳು 0 ಕಿ.ಮೀ.ನಿಂದ 170 ಕಿ.ಮೀ. ವರೆಗೆ ನಾಲಾ ಪಥವನ್ನು ಅನುಮೋದಿಸಲಾಗಿದೆ. 0 ಕಿ.ಮೀ. ನಿಂದ 131 ವರೆಗಿನ ನಾಲಾ ಕಾಮಗಾರಿಗಳ ಪ್ರಗತಿಯು ವಿವಿಧ ಹಂತದಲ್ಲಿರುತ್ತದೆ. ಬುಗಡನಹಳ್ಳಿ ಕೆರೆಯವರೆಗೆ ಕಾಮಗಾರಿಯನ್ನು ಅಂದರೆ 125ನೇ ಕಿಮೀವರೆಗೆ ಡಿಸೆಂಬರ್ 94ರವೇಳೆಗೆ ಪೂರ್ಣಗೊಳಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಇ) ವಿತರಣಾ ನಾಲೆಯ ವಿವರ :

ತುಮಕೂರು ಉಪನಾಲೆಯ 0 ರಿಂದ 107 ಕಿ.ಮೀ. ವರೆಗೆ 17 ವಿತರಣಾ ನಾಲೆಗಳು ಬರುತ್ತಿದ್ದು, ಈ ಪೈಕಿ... ರಿಂದ 12, 14, 15, 17, 17(ಎ) ವಿತರಣಾ ನಾಲಾ ಪಥಕ್ಕೆ ವಾಟರ್ ಪ್ಲಾನಿಂಗ್ ಮಂಜೂರಾತಿ ನೀಡಿದೆ. ಮೇಲಿನ ವಿತರಣಾ ನಾಲಾ ಕೆಲಸಗಳು ಪ್ರಾರಂಭಗೊಂಡಿದ್ದು ಕೆಲಸಗಳು ಪ್ರಗತಿ ವಿವಿಧ ಹಂತದಲ್ಲಿ ಇರುತ್ತದೆ.

ನಾಗಮಂಗಲ ಉಪನಾಲೆಯ 0 ಯಿಂದ 42 ಕಿ.ಮೀ ವರೆಗೆ 9 ವಿತರಣಾ ನಾಲೆಗಳು ಬರುತ್ತಿದ್ದು 9 ವಿತರಣಾ ನಾಲಾ ಪಥಕ್ಕೆ ವಾಟರ್ ಪ್ಲಾನಿಂಗ್ ಮಂಜೂರಾತಿ ನೀಡಿದ್ದು ಕಾಮಗಾರಿಗಳ ವಿರಿಧ ಪ್ರಗತಿಯಲ್ಲಿದೆ.

ಅಡ್ಡಮೋರಿಗಳ ವಿವರ :

ತುಮಕೂರು ಇಂದ.... 126ನೇ ಕಿ.ಮೀ. ಮತ್ತು ನಾಗಮಂಗಲದಿಂದ 62 ಕಿ.ಮೀ. ಉಪನಾಲೆಗಳ ಅಡಿಯಲ್ಲಿ ಅಡ್ಡ ಮೋರಿಗಳ ಕೆಲಸಗಳಿದ್ದು 12.93ರ ಹಂತಕ್ಕೆ 171 ಕಾಮಗಾರಿಗಳು ಮುಗಿದಿದ್ದು, ಅಡ್ಡ ಮೋರಿಗಳ ಕೆಲಸಗಳು ವಿವಿಧ ಹಂತದಲ್ಲಿರುತ್ತದೆ.

ವಿಭಾಗವಾರು ನಾಗಮಂಗಲ ಬ್ರಾಂಚ್ ನಾಲೆ ಮತ್ತು ತುಮಕೂರು ಬ್ರಾಂಚ್ ನಾಲೆಗಳಲ್ಲಿ ಸಿ.ಡಿ. ಕಾಮಗಾರಿಗಳ ಮತ್ತು ವಿತರಣಾ ನಾಲೆಯ ವೆಚ್ಚ ಮಾಡಲಾಗಿರುವ ವಿವರಗಳು.

ವಿಭಾಗದ ಹೆಸರು		ಸಿ.ಡಿ. ಕಾಮಗಾರಿಗಳಿಗೆ ವೆಚ್ಚ (ಲಕ್ಷ ರೂ.ಗಳಲ್ಲಿ)	ವಿತರಣಾ ನಾಲೆಯ ವೆಚ್ಚ (ರೂ.ಲಕ್ಷಗಳಲ್ಲಿ)
1.	ನಂ.4 ಹೆಚ್ಎಲ್ಬಿಸಿ, ವಿಭಾಗ ತುರುವೇಕೆರೆ	871.96	22.02
2.	ಹೇಮಾವತಿ ನಾಲಾ ವಿಭಾಗ, ಯಡಿಯೂರು	271.83	6.06
3.	ನಂ.1ನೇ ಹೇಮಾವತಿ ನಾಲಾ ವಿತರಣಾ ವಿಭಾಗ, ಕಿಬ್ಬನಹಳ್ಳಿ	170.54	16.05
4.	ನಂ.2ನೇ ಹೇಮಾವತಿ ನಾಲಾ ವಿತರಣಾ ವಿಭಾಗ, ಗುಬ್ಬಿ	108.54	136.56
5.	ಹೇಮಾವತಿ ನಾಲಾ ವಿಭಾಗ, ತುಮಕೂರು	303.52	-
6.	ಹೇಮಾವತಿ ನಾಲಾ ತನಿಖಾ ವಿಭಾಗ, ಸೊಲೂರು	303.93	11.11

ಈ) ಜೂನ್ 94ರ ಅಂತ್ಯಕ್ಕೆ ಮುಗಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಉ) 1985-86ನೇ ಸಾಲಿನ ದರಪಟ್ಟಿಯಂತೆ ರೂ 588.00ಕೋಟಿಗಳು. ಡಿಸೆಂಬರ್ 93ರ ಅಂತ್ಯದವರೆಗೆ ಖರ್ಚಾಗಿರುವ ಮೊತ್ತ ರೂ 615 ಕೋಟಿಗಳು.

ಶ್ರೀ ಷಫಿ ಅಹಮದ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಉಪಮುಖ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಇವತ್ತು ಹೇಮಾವತಿ ಯೋಜನೆಯಲ್ಲಿ ಸುಮಾರು 588 ಕೋಟಿ ರೂಪಾಯಿ 85-86ರಲ್ಲಿ ಎಸ್ಟಿಮೇಟ್ ಆಗಿತ್ತು ಆದರೆ 93 ಡಿಸೆಂಬರ್ ವರೆಗೆ 615 ಕೋಟಿ ರೂಪಾಯಿ ವೆಚ್ಚವಾಗಿದೆ ಎಂದು ಹೇಳಿದ್ದಾರೆ. ಆದ್ದರಿಂದ ತಾವು 94ರಲ್ಲಿ ತಮ್ಮ ಕೊಟ್ಟಿರುವ ಉತ್ತರದಲ್ಲಿ ತಮ್ಮ ತಮ್ಮ ಕೆಲಸವನ್ನು ಪೂರೈಸಿಕೊಳ್ಳ ಬೇಕಾದರೆ ಇನ್ನು ಎಷ್ಟು ಹಣ ಬೇಕಾಗುತ್ತದೆ ಮತ್ತು ಇವತ್ತು ಹೇಮಾವತಿ ಪೆಂಡಿಂಗ್ ಬಿಲ್ಸ್ ಎಷ್ಟು ಇದೆ ತಮ್ಮ ಅವಧಿಯಲ್ಲಿ ಈ ಕಾರ್ಯವನ್ನು ಮುಗಿಸಬೇಕಾದರೆ ಕನಿಷ್ಟ ಪಕ್ಷ ತಿಂಗಳಿಗೊಮ್ಮೆ 10 ಕೋಟಿ ರೂಪಾಯಿಯಾದರೂ ತಾವು ಮೀಸಲಾಗಿಟ್ಟರೆ ಮಾತ್ರ 94ರಲ್ಲಿ ಈ ಕೆಲಸ ಪೂರ್ತಿಗೊಳಿಸಲು ಸಾಧ್ಯವಾಗುತ್ತದೆ. ಸುಮಾರು 25 ಕೋಟಿ ರೂಪಾಯಿ ಪೆಂಡಿಂಗ್ ಬಿಲ್ಸ್ ಇದೆ. ತಮ್ಮ ಯೋಜನೆಯಂತೆ ತಿಂಗಳಿಗೆ 10 ಕೋಟಿ ರೂಪಾಯಿ ಹಣ ಬೇಕಾಗುತ್ತದೆ. ಅಷ್ಟು ಹಣವನ್ನು ಒದಗಿಸಿಕೊಟ್ಟು ಈ ಕೆಲಸವನ್ನು 94 ರಲ್ಲಿ ಪೂರ್ತಿಗೊಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಪ್ರಯತ್ನ ಮಾಡುತ್ತೇನೆ.

ಆರಾಧನಾ ಯೋಜನೆಯಡಿಯಲ್ಲಿ ಶಿವಾಜಿನಗರ ಕ್ಷೇತ್ರದಲ್ಲಿ ಕೈಗೊಂಡ ಯೋಜನೆಗಳು

160. ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರಾಧನ ಯೋಜನೆಯು ಆರಂಭವಾದಂದಿನಿಂದ ಬೆಂಗಳೂರು ಶಿವಾಜಿನಗರದ ವಿಧಾನಸಭಾ ಕ್ಷೇತ್ರದಲ್ಲಿ ಆದರಡಿಯಲ್ಲಿ ಕೈಗೊಂಡ ಯೋಜನೆಗಳೆಷ್ಟು?

ಆ) ಪ್ರತಿ ಯೋಜನೆಯ ಅಂದಾಜು ಮೊಬಲಗು ಮತ್ತು ಖರ್ಚು ಮಾಡಿರುವ ಹಣದ ವಿವರ?

ಇ) ಕಾಮಗಾರಿಗಳು ಆನುಮೋದಿತವಾಗಿದ್ದು ಹಣವು ಮಂಜೂರಾಗಿದ್ದರೂ ಸಹ ಸದರೀ ಯೋಜನೆಗಳನ್ನು ಪೂರ್ಣವಾಗಿ ಆನುಷ್ಠಾನಗೊಳಿಸಲಿಲ್ಲವೇಕೆ?

ಈ) ವಸಂತನಗರದ ಬಡಾವಣೆಯಲ್ಲಿರುವ ಶ್ರೀ ಮುನೇಶ್ವರ ದೇವಾಲಯದ ಕಾಮಗಾರಿಗೆ ಸರ್ಕಾರವು ಮಂಜೂರಾತಿ ನೀಡಿದ್ದರೂ ಸಹ ಮತ್ತು 100 ವರ್ಷಗಳ ಹಿಂದೆಯೇ ಸ್ಥಳೀಯ ನಾಗರೀಕರಿಗೆ ದೇವಾಲಯ ನಿರ್ಮಿಸಲು ಸಿ.ಐ.ಟಿ.ಬಿ.ಯವರು ಆವರಣವನ್ನು ಮೀಸಲಾಗಿಟ್ಟು, ಪಕ್ಕದಲ್ಲಿರುವ ಜಾಗದಲ್ಲಿ ವಿದ್ಯಾರ್ಥಿನಿಲಯಕ್ಕೆ ನೀಡಿ ದೇವಸ್ಥಾನ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ವಿಫಲರಾಗಿರುವುದು ಏಕೆ?

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರ ಮತ್ತು ಮುಜರಾಯಿ ಸಚಿವರು) :

ಅ) ಒಟ್ಟು 15 ಯೋಜನೆಗಳು.

ಆ) ವಿವರವನ್ನು ಅನುಬಂಧ-ಎ ನಲ್ಲಿ ತಿಳಿಸಿದೆ.

ಇ) ಒಟ್ಟು 15 ಯೋಜನೆಯಲ್ಲಿ 6 ಯೋಜನೆ ಮುಕ್ತಾಯವಾಗಿದೆ. 6 ಯೋಜನೆ ಪ್ರಗತಿಯಲ್ಲಿದೆ 3 ಯೋಜನೆ ಪ್ರಾರಂಭಿಸಬೇಕಾಗಿದೆ.

ಈ) ನಿವೇಶನದ ಬಗ್ಗೆ ವಿವಾದವಿದ್ದು ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಲಾಗಿದೆ